**ಯು ಯೌಯೌ**
**ಸಂದರ್ಶನ**

◆ **ನಿಮ್ಮ ಬಾಲ್ಯದ ಪರಿಸರ ಮತ್ತದರ ಸಾಂಸ್ಕೃತಿಕ ಹಿನ್ನಲೆ ಬಗ್ಗೆ ತಿಳಿಸಿ? ನಿಮ್ಮ ಮನಸಿನಲ್ಲಿ ಅಚ್ಚೊತ್ತಿರುವ ನಿಜ ಘಟನೆಗಳನ್ನು ಹಂಚಿಕೊಳ್ಳಿ.**

ನಾನು ಹುಟ್ಟಿದ್ದು ಸಿಚುವಾನ್ ಪ್ರಾಂತ್ಯದ ನೈರುತ್ಯ ಭಾಗದ ಸಣ್ಣ ಪಟ್ಟಣದಲ್ಲಿ. ಇಲ್ಲಿ ವಿಶ್ವವಿಖ್ಯಾತಿ ಪಡೆದ ಮೌಂಟ್ ಇಮೆಯ್ ಎಂಬ ಪರ್ವತವಿದೆ. ನನ್ನೂರು ಈ ಪರ್ವತದ ತಪ್ಪಲಲ್ಲಿದೆ ಅಥವಾ ಪದತಲದಲ್ಲಿದೆ. ಹವಾಮಾನ ಚೆನ್ನಾಗಿದ್ದಾಗ ನೀವು ಇಮೆಯ್ ಪರ್ವತವನ್ನು ನೋಡಬಹುದು. ನನ್ನ ದೃಷ್ಟಿಯಲ್ಲಿ ಅದು ಬಹುತೇಕ ಅತ್ಯುನ್ನತ ಸ್ಥಾನವನ್ನು ಪಡೆದಿತ್ತು. ಪಟ್ಟಣದ ಎಲ್ಲ ಜನರ ಮೇಲೆ ಒಂದು ಕಣ್ಣಿಡುವ ಆಧ್ಯಾತ್ಮಿಕ ಗುರುವಿನಂತೆ ಅದು ಅಚಲವಾಗಿ ನಿಂತಿರುತ್ತದೆ. ನನ್ನ ಒಂಬತ್ತನೇ ವಯಸ್ಸಿನಲ್ಲಿ ಮೊದಲ ಸಲ ಮೌಂಟ್ ಇಮೆಯ್ ತುದಿ ಏರಿದೆ. ಶಿಖರದ ತುದಿಗೆ ತಲುಪಿದಾಗ, ಸಮತಟ್ಟಾದ ಸಪಾಟು ನೆಲದಲ್ಲಿ ನಿಲ್ಲುವುದಕ್ಕೂ, ಪರ್ವತದ ತುದಿಯಲ್ಲಿ ನಿಲ್ಲುವುದಕ್ಕೂ ಅಂತಹ ವ್ಯತ್ಯಾಸವಿಲ್ಲವೆಂಬುದನ್ನು ಕಂಡುಕೊಂಡೆ. ಯಾಕೆಂದರೆ, ಮೋಡ ಕವಿದ ಆಕಾಶ ಇನ್ನಷ್ಟು ಮೋಡಗಳಿಂದ ತುಂಬಿ ಕೈಗೆಟುಕದ ದೂರದಲ್ಲೇ ಉಳಿದಿತ್ತು. ಈ ಪರ್ವತ ಇತರ ಸಾಧಾರಣ ಪರ್ವತಗಳಿಗಿಂತ ಭಿನ್ನವಾಗೇನೂ ಇಲ್ಲ. ಬಾಳು ಎಂದರೆ ಭ್ರಮೆಗಳ ಕಳಚಿಕೊಳ್ಳುವ ಪ್ರಕ್ರಿಯೆ ಎಂದು ನನಗಾಗ ಅರಿವಾಯಿತು.

ನಗರೀಕರಣದ ಪರಿಣಾಮಗಳು ತಟ್ಟದ ಪುಟ್ಟ ಪಟ್ಟಣದಲ್ಲಿ ನಾನು ಹುಟ್ಟಿ ಬೆಳೆದದ್ದು. ನನ್ನ ಬದುಕಿನ ವೇಗ ತುಲನಾತ್ಮಕವಾಗಿ ಮಂದಗತಿಯದಾಗಿತ್ತು. ಅಪ್ಪ ನನ್ನನ್ನ ಬೈಕಿನಲ್ಲಿ ಕೂರಿಸಿಕೊಂಡು ಪ್ರತೀ ವಾರ ಹಳ್ಳಿಗಳಿಗೆ ಕರೆದೊಯ್ಯುತ್ತಿದ್ದುದರಿಂದ ನಗರದ ಹೊರಗೆ ಮತ್ತು ಹಳ್ಳಿಗಳಲ್ಲಿ ತಿರುಗಾಡುವ, ಆಟವಾಡುವ ಅವಕಾಶ ನನಗೆ ದೊರಕಿತ್ತು. ಇದು ಪ್ರಕೃತಿಯೊಂದಿಗೆ ನನ್ನನ್ನು ಬೆಸೆಯಿತು. ಐದನೇ ವಯಸ್ಸಿನಲ್ಲಿ ಗಂಭೀರ ಕಾಯಿಲೆಗೆ ತುತ್ತಾಗಿ ಎರಡು ವರ್ಷಗಳ ನಂತರ ಗುಣವಾದದ್ದನ್ನ ಬಿಟ್ಟರೆ, ನನ್ನ ಬಾಲ್ಯ ಬಹುತೇಕರ ಬಾಲ್ಯಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಆ ಕಾಯಿಲೆ ನನ್ನ ಬದುಕಿನಲ್ಲಿ ಅಚ್ಚಳಿಯದ ಗುರುತು ಉಳಿಸಿದೆ. ಅದರ ಸುಪ್ತ ನೆನಪಿನ ಆಧಾರದಿಂದಲೇ ನನ್ನ ಕೃತಿಗಳಲ್ಲಿ ಹಸಿ ಹಸಿ ನೋವಿನ ಅಕ್ಷರಗಳು ಹುಟ್ಟಿವೆ. ಬಾಲ್ಯದ ಬಹುತೇಕ ಖುಷಿಯ ಕ್ಷಣಗಳನ್ನು ನಾನು ಮರೆತುಬಿಟ್ಟದ್ದೇನೆ. ಅನಾರೋಗ್ಯದಿಂದುಂಟಾದ ಆಘಾತದ ಗಾಯ ನನ್ನಲ್ಲಿ ಈಗಲೂ ಮಾಸಿಲ್ಲ. ಮುಖರಹಿತ ಸಂಕಟಕ್ಕಿಂತ ಅಪರೂಪಕ್ಕೊಮ್ಮೆ ಮುಖ ತೊಟ್ಟು ಬರುವ ಸಂತೋಷ ನನಗಿಷ್ಟ. ಅದು ಭೌತಿಕ ಆನಂದವನ್ನುಂಟುಮಾಡುತ್ತದೆಂಬುದು ಸತ್ಯ ಮತ್ತು ಸ್ಪಷ್ಟ. ಇದು ನನ್ನ ಆರಂಭಿಕ ಪದ್ಯಗಳ ಧ್ವನಿಯನ್ನು ರೂಪಿಸಿತು. ನಾನು ನನ್ನ ಬಾಲ್ಯದ ಬಗ್ಗೆ ಬರೆದಿರುವುದು ಬಹಳ ಕಡಿಮೆ. ಮತ್ತೆ ಬಾಲ್ಯದ ಬಗ್ಗೆ ನಾನು ಬರೆದಿರುವ ಕೆಲವೇ ಪದ್ಯಗಳು ಈ ನೆನಪಿನ ಭಾರವನ್ನ ಬಹುವಾಗಿ ಹೊತ್ತು ನಿಂತಿವೆ.

◆ **ಬಹಳ ಸಲ ನಿಮ್ಮ ಕವಿತೆಯ ನಿರೂಪಕ ಯಾರೆಂದೇ ಬಗೆಹರಿಯುವುದಿಲ್ಲ. ನೀವು ಮಹಿಳೆಯಾದ್ದರಿಂದ ಹೆಣ್ಣಿರಬಹುದು ಅಂತ ಊಹೆ ಮಾಡಬಹುದು. ನಿಜ ಹೇಳಬೇಕೆಂದರೆ, ಇದು ತುಂಬಾ ಸಂಕೀರ್ಣವಾದುದು ಮತ್ತಿದು ಒಳ್ಳೆಯ ಕವಿತೆಯ ಲಕ್ಷಣವೂ ಹೌದು. ಇದರ ಕುರಿತು ಸ್ವಲ್ಪ ಬಿಡಿಸಿ ಹೇಳಿ.**

ನನ್ನ ಕೆಲವು ಕೃತಿಗಳಲ್ಲಿ ಬಲವಾದ ಸ್ತ್ರೀಪ್ರಜ್ಞೆ ವ್ಯಕ್ತವಾಗುತ್ತದೆ. ಇದರ ಅರ್ಥ ನನ್ನೆಲ್ಲಾ ಕೃತಿಗಳು ಹೀಗೇ ಇವೆ ಎಂದೋ ಅಥವಾ ಜೆಂಡರ್ ಐಡೆಂಟಿಟಿ ನನ್ನೆಲ್ಲಾ ಬರವಣಿಗೆಯ ತಳಹದಿ ಎಂದೋ ಅಲ್ಲ. ಲಿಂಗವನ್ನು ನಾನೆಂದೂ ಪೂರ್ವಕಲ್ಪನೆಯಾಗಿ ಬಳಸುವುದಿಲ್ಲ. ಅದು ನನ್ನ ಸೃಷ್ಟಿಕ್ರಿಯೆಯನ್ನು ಮಿತಿಗೊಳಿಸುತ್ತದೆ. ಬಲವಾದ ಉದ್ದೇಶಗಳ ಬದಲಾಗಿ ಆಳವಾಗಿ ಮತ್ತು ಉತ್ಕಟವಾಗಿ ನಾನು ಅನುಭವಿಸಿದ್ದನ್ನು ಮತ್ತು ಆ ಕ್ಷಣಕ್ಕೆ ನನ್ನನ್ನು ಯಾವುದು ತಟ್ಟುತ್ತದೋ ಅಂತಹದ್ದನ್ನು ಮಾತ್ರ ಬರೆಯಲು ಯತ್ನಿಸುತ್ತೇನೆ.